


# ಆನ್‌ಲೈನ್ ಕ್ಲಾಸ್ ವರ್ಸಸ್ ಚಾಕ್ ಅಂಡ್ ಟಾಕ್: ಯಾವುದು ಸರಿ?



**ಗುರುರಾಜ್ ಎಸ್. ದಾವಣಗೆರೆ**
**ಪ್ರಾಚಾರ್ಯರು,** ವಿಡಿಯಾ ಪೂರ್ಣಪ್ರಜ್ಞ ಪಿಯು ಕಾಲೇಜು, ಬೆಂಗಳೂರು

ವಿದ್ಯಾರ್ಥಿ ಬದುಕಿನಲ್ಲಿ ನಿರ್ಣಾಯಕವೆನಿಸಿರುವ ಹತ್ತು ಹಾಗೂ ಹನ್ನೆರಡನೆಯ ತರಗತಿಯ ವಾರ್ಷಿಕ ಪರೀಕ್ಷೆಗಳನ್ನು ನಡೆಸಲು ದೇಶಾದ್ಯಂತ ತಯಾರಿ ಮಾಡಿಕೊಳ್ಳುವಷ್ಟರಲ್ಲಿ ಕೋವಿಡ್ ಎರಡನೇ ಅಲೆ ಸ್ಫೋಟಗೊಂಡು ತೆರೆದ ಶಾಲೆಗಳನ್ನೆಲ್ಲ ಮುಚ್ಚಿ ಆನ್‌ಲೈನ್ ತರಗತಿಗಳಿಗೆ ಹಿಂದಿರುಗಿ ಎಂದು ಶಿಕ್ಷಣ ಸಂಸ್ಥೆಗಳಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹೇಳಿದ್ದೇ ತಡ, ಟ್ಯೂಶನ್ ಮತ್ತು ಕೋಚಿಂಗ್ ಸೆಂಟರ್‌ಗಳ ಮೂಲಕ ಪ್ರರ್ಧಮಾನಕ್ಕೆ ಬಂದ ಬೈಜೂಸ್, ಆಕಾಶ್, ಖಾನ್ಸ್ ಅಕಾಡೆಮಿ ಮತ್ತು ಇತ್ತೀಚಿನ ಅನ್‌ಅಕಾಡೆಮಿ, ವೈಟ್ ಹ್ಯಾಟ್ ಜ್ಯೂನಿಯರ್ ಸಮೂಹಗಳು – 'ನಮ್ಮ ಆನ್‌ಲೈನ್ ಶಿಕ್ಷಣಕ್ಕೆ ಸೇರಿ, ಬೇಕಾದ ಸಕ್ಸಸ್ ನಿಮ್ಮದಾಗುತ್ತದೆ' ಎಂಬರ್ಥದ ಆಕರ್ಷಕ ಜಾಹೀರಾತುಗಳನ್ನು ರೇಡಿಯೋ, ಟೀವಿ, ಪತ್ರಿಕೆ, ಸಾಮಾಜಿಕ ಜಾಲತಾಣಗಳ ತುಂಬ ತುಂಬಿಸಿ ವಿದ್ಯಾರ್ಥಿ ಹಾಗೂ ಪೋಷಕರನ್ನು ಆಕರ್ಷಿಸಲು ಶುರುಮಾಡಿವೆ.

ಕಳೆದ ವರ್ಷ, ಲಾಕ್‌ಡೌನ್ ಆರಂಭದ ಸಮಯದಲ್ಲಿ, ಆನ್‌ಲೈನ್ ತರಗತಿ ಒಂದೆರಡು ತಿಂಗಳು ಇದ್ದು ನಂತರ ವಿದ್ಯಾರ್ಥಿಗಳು ಶಾಲೆಗೆ ಮರಳುತ್ತಾರೆಂಬ ಆಶಾಭಾವನೆ ಪೋಷಕರಲ್ಲಿತ್ತು. ಅದು ಕೇವಲ 40ರಿಂದ 45 ದಿನ ಮಾತ್ರ. ಯಾವಾಗ ಕೋವಿಡ್‌ನ ಎರಡನೇ ಅಲೆ ಅಪ್ಪಳಿಸಿತೋ, ತರೆದಿದ್ದ ಶಾಲೆಕಾಲೇಜುಗಳು ರಪ್ಪನೆ ಬಾಗಿಲು ಹಾಕಿಕೊಂಡವು. ಪರಿಸ್ಥಿತಿ ಕೈಮೀರಿದಾಗ ನಡೆಯಬೇಕಿದ್ದ ನಿರ್ಣಾಯಕ ಪರೀಕ್ಷೆಗಳನ್ನು ಅನಿರ್ದಿಷ್ಟ ಅವಧಿಗೆ ಮುಂದೂಡಿ, ಉಳಿದ ಪಠ್ಯಗಳನ್ನು ಆನ್‌ಲೈನ್ ಮೂಲಕವೇ ಕಲಿಸಿ ಎಂಬ ನಿರ್ದೇಶನ ನೀಡಿದ ಸರ್ಕಾರಗಳು, ಆನ್‌ಲೈನ್ ಗುಮ್ಮವನ್ನು ಮತ್ತೆ ಮನೆ ಹೊಕ್ಕುವಂತೆ ಮಾಡಿವೆ. ಶಾಲೆಯ ಸಹಜ ವಾತಾವರಣದಲ್ಲಿ ಕಲಿಯುತ್ತಿದ್ದ ಮಕ್ಕಳು ಸಡನ್ನಾಗಿ ಬದಲಾದ ಹೊಸ ವ್ಯವಸ್ಥೆಗೆ ಹೊಂದಿಕೊಳ್ಳಲಾಗದೆ ತತ್ತರಿಸಿ ಹೋಗಿದ್ದಾರೆ.

ಇನ್ನು ಮುಂದೆ ಶಾಲಾ ತರಗತಿ ನಡೆಯುವುದೇ ಇಲ್ಲ, ಆನ್‌ಲೈನ್ ಶಿಕ್ಷಣವೇ ಗತಿ ಎಂಬ ವಾತಾವರಣ ನಿರ್ಮಾಣವಾಗುತ್ತಿದೆ. ಕಳೆದ ಲಾಕ್‌ಡೌನ್ ಸಮಯದಲ್ಲಿ ಆನ್‌ಲೈನ್ ತರಗತಿ ಹೆಸರಿನಲ್ಲಿ ಮೊಬೈಲ್ ಗೀಳಿಗೆ ಬಿದ್ದು, ಇಂಟರ್‌ನೆಟ್‌ನಲ್ಲಿ ಆಟ ಆಡಿಕೊಂಡು, ಕಣ್ಣು, ಕುತ್ತಿಗೆಯ ಆರೋಗ್ಯ ಸಮಸ್ಯೆಗಳಿಗೆ ಈಡಾಗಿ, ಶಾಲೆಯ ಗೆಳೆಯರನ್ನು ಮಿಸ್ ಮಾಡಿಕೊಂಡು ಖಿನ್ನತೆಗೆ ಒಳಗಾಗಿ, ಏನೂ ಕಲಿಯದ ಮಕ್ಕಳು ಈ ಸಲವೂ ಶಾಲೆಯ ಮುಖ ನೋಡದಂತಾದೀತು ಎಂದು ಹೆದರಿರುವ ಹಲವು ಪೋಷಕರು. ಆನ್‌ಲೈನ್ ಶಿಕ್ಷಣ ಸರಿಯೆ? ಶಾಲೆಯ ಸಾಂಪ್ರದಾಯಿಕ ಚಾಕ್ ಅಂಡ್ ಟಾಕ್ ಉತ್ತಮವೆ? ಅಥವಾ ಎರಡನ್ನೂ ಬಳಸಿ ಪಾಠ ಕಲಿಸುವ ಶಾಲೆಗಳಿವೆಯೇ ಎಂದು ಇಂಟರ್‌ನೆಟ್‌ನಲ್ಲಿ ಸರ್ಚ್ ಮಾಡುತ್ತಿದ್ದಾರೆ. ಶಿಕ್ಷಣವನ್ನು ಸರಕನ್ನಾಗಿಸುವ ಜಾಹೀರಾತುಗಳಿಗೆ ಮರುಳಾದ ಕೆಲವರು ಅವಸರದಲ್ಲಿ ಮಕ್ಕಳನ್ನು ಆನ್‌ಲೈನ್ ಜಾಲಕ್ಕೆ ತಳ್ಳುತ್ತಿದ್ದಾರೆ.

ಬೆಂಗಳೂರು, ಚೆನ್ನೈ, ಮುಂಬೈನಂಥ ನಗರಗಳಲ್ಲೇ 4ಜಿ ಇಂಟರ್‌ನೆಟ್ ಸಂಪರ್ಕ ಸರಿಯಾಗಿಲ್ಲ. ನಲವತ್ತು ನಿಮಿಷದ ತರಗತಿಯಲ್ಲಿ ಹಲವು ಸಲ ಲಿಂಕ್ ನಷ್ಟಗೊಂಡು, ಆಡುವ ಮಾತು ಕೇಳಿಸದೆ, ತೋರಿಸುವ ಚಿತ್ರ ಕಾಣದೆ ವಿದ್ಯಾರ್ಥಿಗಳು ಕಂಗಾಲಾಗುತ್ತಾರೆ. ಶೇ 65ರಷ್ಟು ಜನ ವಾಸಿಸುವ ನಮ್ಮ ಹಳ್ಳಿಗಳಲ್ಲಿ ಈಗಲೂ 3ಜಿ ನೆಟ್‌ವರ್ಕ್ ನಡೆಯುತ್ತಿದೆ. ಸರಿಯಾದ ವಿದ್ಯುತ್ ಸಂಪರ್ಕವೂ ಇಲ್ಲದ ಪರಿಸ್ಥಿತಿಯಲ್ಲಿ, ಯುಟ್ಯೂಬ್, ಗೂಗಲ್ ಮೀಟ್, ಜೂಮ್‌ಗಳಲ್ಲಿ ಮಕ್ಕಳಿಗೆ ಪಾಠ ತಲುಪುತ್ತಿಲ್ಲ. ಶಾಲೆ ತೊರೆದ ಹಳ್ಳಿಯ ಮಕ್ಕಳು ಕೃಷಿ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಾರೆ. ವಿದ್ಯುತ್ ಇರುವ ಕಡೆ ಇಂಟರ್‌ನೆಟ್ ಸೌಲಭ್ಯವಿರುವುದಿಲ್ಲ, ಬೇಕಾದ ಸ್ಪೀಡ್ ಇರುವುದಿಲ್ಲ, ಬಿಸಿಯಾಗದ, ಹ್ಯಾಂಗ್ ಆಗದ ಸ್ಮಾರ್ಟ್ ಫೋನ್ ತೆಗೆದುಕೊಳ್ಳುವ ಆರ್ಥಿಕ ಶಕ್ತಿ ಅನೇಕರಿಗೆ ಇಲ್ಲ. ಕೆಲವೊಮ್ಮೆ ಶಿಕ್ಷಕರ ಮನೆಯಲ್ಲಿ ನೆಟ್‌ವರ್ಕ್ ಸಮಸ್ಯೆ ಎದುರಾಗಿ ಅದೂ ಸರಿಹೋಗಿ ಇನ್ನೇನು ಪಾಠ ಪ್ರಾರಂಭವಾಗುವ ಹೊತ್ತಿಗೆ ವಿದ್ಯಾರ್ಥಿಯ ಇಂಟರ್‌ನೆಟ್ ಡೇಟಾ ಪ್ಯಾಕ್ ಖಾಲಿ!. ನನಗೂ ಆನ್‌ಲೈನ್ ಕ್ಲಾಸ್ ಇದೆ, ಮೊಬೈಲ್ ಬೇಕು ಎಂದು ತಮ್ಮನೋ, ತಂಗಿಯೋ ತಗಾದೆ ಮಾಡುತ್ತಾನೆ/ಳೆ. ಅಲ್ಲಿಗೆ ಆನ್‌ಲೈನ್ ಕ್ಲಾಸ್ ಕೃಷ್ಣಾರ್ಪಣವಾಗಿರುತ್ತದೆ.

ಯುನೆಸ್ಕೋ ವರದಿ ಪ್ರಕಾರ ಕೋವಿಡ್ ಹತ್ತರಲ್ಲಿ ಒಂಬತ್ತು ವಿದ್ಯಾರ್ಥಿಗಳ ಕಲಿಕೆಗೆ ಅಡ್ಡಿಯಾಗಿದೆ. ವಿಶ್ವದ 154 ಕೋಟಿ ವಿದ್ಯಾರ್ಥಿಗಳು ತೀವ್ರ ತೊಂದರೆ ಅನುಭವಿಸುತ್ತಿದ್ದು 15 ಲಕ್ಷ ಶಾಲೆ, ಮತ್ತು 50 ಸಾವಿರ ಉನ್ನತ ಶಿಕ್ಷಣ ಸಂಸ್ಥೆಗಳಿರುವ ನಮ್ಮಲ್ಲಿ 32 ಕೋಟಿಗೂ ಹೆಚ್ಚು ವಿದ್ಯಾರ್ಥಿಗಳ ಮೇಲೆ ಇದು ದೂರಗಾಮಿ ಆರ್ಥಿಕ ಮತ್ತು ಸಾಮಾಜಿಕ ಅಡ್ಡ ಪರಿಣಾಮಗಳನ್ನುಂಟು ಮಾಡಿದೆ. ಆನ್‌ಲೈನ್ ಶಿಕ್ಷಣ ಪಡೆಯಲಾಗದ ಶೇ 44ರಷ್ಟು ವಿಶೇಷ ಚೇತನ ಮಕ್ಕಳು ಕಲಿಕೆಯಿಂದ ಹೊರಗುಳಿದ್ದಾರೆ. ಸಮೀಕ್ಷೆಯೊಂದರ ಪ್ರಕಾರ ಒಡಿಶಾ, ಜಾರ್ಖಂಡ್, ಮಧ್ಯಪ್ರದೇಶ, ತ್ರಿಪುರ, ಚೆನ್ನೈ, ನಾಗಾಲ್ಯಾಂಡ್, ಸಿಕ್ಕಿಂ, ಹರಿಯಾಣ, ಜಮ್ಮು ಮತ್ತು ಕಾಶ್ಮೀರದ ಶೇ 77ರಷ್ಟು ವಿದ್ಯಾರ್ಥಿಗಳು ದೂರ ಶಿಕ್ಷಣ ನಮಗೆ ದೂರದ ಮಾತು ಎಂದಿದ್ದಾರೆ. ತಡವಾದರೂ ಚಿಂತೆಯಿಲ್ಲ, ಶಾಲೆಕಾಲೇಜುಗಳ ಸಹಜ ವಾತಾವರಣದಲ್ಲೇ ಮಕ್ಕಳು ಕಲಿಯಬೇಕು ಎನ್ನುವುದು ಈ ಮಕ್ಕಳ ಪೋಷಕರ ವಾದ.

ಇದುವರೆಗಿನ ಅಧ್ಯಯನಗಳಲ್ಲಿ ಆನ್‌ಲೈನ್ ಶಿಕ್ಷಣ ಆಯ್ಕೆಯಾಗಬೇಕೇ ಹೊರತು ಅನಿವಾರ್ಯ ಆಗಬಾರದು ಹಾಗೂ ಸಾಂಪ್ರದಾಯಿಕ ಶಾಲಾ ತರಗತಿಗಳ ಜೊತೆ ಆನ್‌ಲೈನ್ ಶಿಕ್ಷಣ ಬೆರೆತರೆ ಕಲಿಕೆ ಮತ್ತಷ್ಟು ಸ್ಟ್ರಾಂಗ್ ಆಗುತ್ತದೆ ಎಂಬ ಅಭಿಪ್ರಾಯ ಸಾರ್ವತ್ರಿಕವಾಗಿದೆ. ಮಾನವ ಸ್ಪರ್ಶವಿರುವ ವಿನೋದಭರಿತ, ಕ್ರಿಯಾತ್ಮಕ ಮತ್ತು ಸಂವಾದ ರೂಪದ ಶಿಕ್ಷಣ ಬೇಕೇ ಬೇಕು. ಇಲರ್ನಿಂಗ್‌ನ ಅತಿಯಾದ ಮತ್ತು ಅನುಚಿತ ಬಳಕೆ ತಡೆಯಲು ಸೈಬರ್ ಸುರಕ್ಷತಾ ಕೈಪಿಡಿಯನ್ನು ಬಳಸಲು ಮಕ್ಕಳನ್ನು ಸಜ್ಜುಗೊಳಿಸಬೇಕು.

ಈಗ ಇವುಗಳ ಕುರಿತು ನಾವೇನು ಮಾಡಬಹುದು ಎಂದೂ ಗಮನ ಹರಿಸಬೇಕು. ಹೇಗಿದ್ದರೂ ಈ ಸಮಸ್ಯೆಗಳು ಆನ್‌ಲೈನ್ ಶಿಕ್ಷಣ ಮತ್ತು ಮುಖಾಮುಖಿ ಶಿಕ್ಷಣ ಎರಡಕ್ಕೂ ಸಮಾನವಾಗಿ ಅನ್ವಯಿಸಬಹುದಾದ್ದರಿಂದ ನಮ್ಮ ಪರಿಹಾರಗಳೂ ಎರಡಕ್ಕೂ ಉಪಯೋಗಕ್ಕೆ ಬರುವಂತಿರಬೇಕು.

ಮೊದಲನೆಯದಾಗಿ ಕಲಿಕೆಯ ಆವರಣ. ಇದು 'ಕಲಿಕೆಯ ಸ್ಥಳ' ಮತ್ತು ಇದು 'ಕಲಿಕೆಯ ಸಮಯ' ಎನ್ನುವ ಒಂದು ನಿರ್ದಿಷ್ಟ ಔಪಚಾರಿಕ ವಿಂಗಡಣೆ ಅತ್ಯಗತ್ಯ. ಯಾವ ಸಂದರ್ಭ ಇಂತಹ ಔಪಚಾರಿಕ ಕಲಿಕೆಯ ಸಂದರ್ಭವಲ್ಲ ಎಂದೂ ಇದರಿಂದ ತಿಳಿಯುವಂತಿರಬೇಕು. ಹಗಲೆಲ್ಲಾ ಒಂದು ಕಂಪ್ಯೂಟರ್ ಅನ್ನು ಚಲಾಯಿಸಿ, ಅದರ ಮುಂದೆ ಕುಳಿತ ತಕ್ಷಣ ಕಲಿಕೆ ನಡೆಯುತ್ತಿದೆ ಎಂದು ನಮಗೆ ನಾವೇ ಅಂದುಕೊಳ್ಳುವ ದೋಷದಿಂದ ಇದು ನಮ್ಮನ್ನು ಪಾರು ಮಾಡಬಹುದು. ಇದಕ್ಕಿಂತ ಮುಖ್ಯವಾಗಿ, ಕಲಿಕೆಯ ಆವರಣದೊಳಗೆ